ಅಸಲು ದಾವೆ ನಂ.89/2022

ಡಿ.ಡಬ್ಲೂಃ -1

ದಿನಾಂಕಃ 07/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಜೆ ಪಿ ವಕೀಲರಿಂದ**

1. ನಾನು ಎಂ ಎ, ಎಂ ಎಡ್ ಪದವಿದಾರ. ನಾನು ನಿವೃತ್ತ ಹೈಯ್ ಸ್ಕೂಲ್ ಇನ್ಚಾರ್ಜ ಹೆಡ್ ಮಾಸ್ಟರ್ ಆಗಿದ್ದೇನೆ. ದಿ.30.05.2026 ರಂದು ನಾನು ನಿವೃತ್ತಿ ಹೊಂದಿದ್ದೇನೆ. ನಾನು 33 ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ಪ್ರತಿವಾದಿ ನನ್ನ ಮಾವ. ಅವರಿಗೆ ಪ್ರತಿವಾದಿ 1(ಎ) ಪತ್ನಿ ಮತ್ತು 1(ಬಿ) ಒಬ್ಬಳೇ ಮಗಳು. ಈ ದಾವೆಯ ಕರಾರು ಪತ್ರದ ಬಗ್ಗೆ ನನಗೆ ವ್ಯಯಕ್ತಿಕ ಮಾಹಿತಿ ಇದೆ. ನನಗೆ ಆಸ್ತಿಗಳನ್ನು ಮಾರಾಟ ಮಾಡುವ ಬಗ್ಗೆ ಮತ್ತು ಖರೀದಿ ಮಾಡುವ ಬಗ್ಗೆ ಮಾಹಿತಿ ಇದೆ ಅನ್ನುವುದು ಸರಿ.

2. ಪ್ರತಿವಾದಿಗೆ ಒಟ್ಟು 3 ಸರ್ವೆ ನಂಬರ್ ಗಳಲ್ಲಿ 4 ಎಕರೆ ಜಮೀನು ಇದೆ. ಪ್ರತಿವಾದಿಗೆ ಲಕ್ಕೇನಹಳ್ಳಿಯಲ್ಲಿ ಸರ್ವೆ ನಂಬರ್ 17/3 ರಲ್ಲಿ 19 ಗುಂಟೆ, 17/4 ರಲ್ಲಿ 4 ಗುಂಟೆ, 22 ರಲ್ಲಿ 1 ಎಕರೆ 8 ಗುಂಟೆ, 23 ರಲ್ಲಿ 7 ಮುಕ್ಕಾಲು ಗುಂಟೆ, 24/1 ರಲ್ಲಿ 34 ಗುಂಟೆ, 24/2 ರಲ್ಲಿ 19 ಗುಂಟೆ ಮತ್ತು 26 ರಲ್ಲಿ 1 ಎಕರೆ 34 ಗುಂಟೆ ಆಸ್ತಿ ಇದೆ ಅಂದರೆ ಈ ಆಸ್ತಿಗಳಲ್ಲಿ ಕೆಲವನ್ನು ಮಾರಿದ್ದಾರೆ ಉಳಿದ ಆಸ್ತಿಗಳನ್ನು ಮಗಳಿಗೆ ದಾನ ಪತ್ರದ ಮೂಲಕ ನೀಡಿದ್ದಾರೆ. ನಡಂಪಲ್ಲಿ ಗ್ರಾಮದ ಸರ್ವೆ ನಂ.49/3 ರಲ್ಲಿ 1 ಎಕರೆ 10 ಗುಂಟೆ, ಕಾಮಸಮುದ್ರಂ ನಲ್ಲಿ ಸರ್ವೆ ನಂ.22/3 ರಲ್ಲಿ 1 ಎಕರೆ ಆಸ್ತಿಗಳು ನನ್ನ ಮಾವನ ಹೆಸರಿನಲ್ಲಿವೆ ಅನ್ನುವುದು ಸರಿಯಲ್ಲ. ದಾವಾ ಆಸ್ತಿ ಮತ್ತು ಸರ್ವೆ ನಂ.29/19 ಕಾಮಸಮುದ್ರ ಗ್ರಾಮದಲ್ಲಿ ಇವೆ ಅನ್ನುವುದು ಸರಿ.

3. ಲಕ್ಕೇನಹಳ್ಳಿಯ ಆಸ್ತಿಗಳ ಪೈಕಿ ಎಷ್ಟು ಆಸ್ತಿಗಳನ್ನು ತನ್ನ ಮಗಳಿಗೆ ಪ್ರತಿವಾದಿ ದಾನ ಮಾಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಉಳಿದ ಆಸ್ತಿಗಳನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿ 1 (ಬಿ) ರವರ ವಿವಾಹ 2001

ರಲ್ಲಿ ನಡೆದಿರುತ್ತದೆ. ಪ್ರತಿವಾದಿಗೆ ಗಂಡು ಮಕ್ಕಳು ಇಲ್ಲದ ಕಾರಣ ನಾನು ಅವರ ಎಲ್ಲಾ ಆಸ್ತಿಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ದಾವಾ ಆಸ್ತಿಯನ್ನು ನಾನೇ ಖರೀದಿಸಿ ಪ್ರತಿವಾದಿಯ ಹೆಸರಿಗೆ ಬರೆಯಿಸಿದ್ದೆನು ಅನ್ನುವುದು ಸರಿಯಲ್ಲ. ದಿ.03.02.2014 ರಂದು ದಾವಾ ಆಸ್ತಿಯ ಕ್ರಯ ಪತ್ರ ಪ್ರತಿವಾದಿಯ ಹೆಸರಿಗೆ ಶ್ರೀನಿವಾಸಪ್ಪ ರವರಿಂದ ಆಗಿದೆ ಅನ್ನುವುದು ಸರಿ. ಅದೇ ದಿನ ನನ್ನ ಮಾವ ಸರ್ವೆ ನಂ. 23/19 ರಲ್ಲಿ ಕರಾರು ಹೊರತು ಪಡಿಸಿ 1 ಎಕರೆ ವಿಸ್ತೀರ್ಣವನ್ನು ನನ್ನ ಮಾವ ಖರೀದಿಸಿದ್ದರು ಅನ್ನುವುದು ಸರಿ. ಸದರಿ ಕ್ರಯ ಪತ್ರಕ್ಕೆ ನನ್ನ ಮಾವ ಸಹಿ ಮಾಡಿದ್ದಾರೆ ಅನ್ನುವುದು ಸರಿ, ನಂತರ ಮಾಡುತ್ತಿರಲಿಲ್ಲ. ಯಾವ ದಿನಾಂಕದಿಂದ ಅವರಿಗೆ ಸಹಿ ಮಾಡಲು ಆಗುತ್ತಿರಲಿಲ್ಲ ಎಂದು ಹೇಳಲು ಆಗುವುದಿಲ್ಲ. ನನ್ನ ಜನ್ಮ ದಿ.01.06.1966 ಆಗಿರುತ್ತದೆ. ನಾನು ಕೆಲಸದಲ್ಲಿ ಇದ್ದುದ್ದರಿಂದ ಆಸ್ತಿಗಳನ್ನು ಖರೀದಿಸಲು ಆಗದ ಕಾರಣ ನನ್ನ ಮಾವನ ಹೆಸರಿನಲ್ಲಿ ನಾನು ಆಸ್ತಿಗಳನ್ನು ಖರೀದಿಸುತ್ತಿದ್ದೆನು ಅನ್ನುವುದು ಸರಿಯಲ್ಲ.

4. ದಾವಾ ಆಸ್ತಿಯ ವ್ಯವಹಾರವನ್ನು ವಾದಿಯೊಂದಿಗೆ ನಾನು, ನನ್ನ ಮಾವ ಸೇರಿ ಪಿಡಬ್ಲೂ 2 ರಘುಪತಿಯೊಂದಿಗೆ ಮಾಡಿದ್ದೇವೆ. ರಘುಪತಿ ನನಗೆ 20 ವರ್ಷಗಳಿಂದ ಪರಿಚಯ. ಈ ವ್ಯವಹಾರಕ್ಕೆ ವಾದಿಯು ನನಗೆ ರಘುಪತಿ ರವರ ಮೂಲಕ ಪರಿಚಯವಾಗಿರುತ್ತಾರೆ ಅನ್ನುವುದು ಸರಿಯಲ್ಲ. ಪ್ರತಿವಾದಿಯು ವಾದಿಗೆ ದಾವಾ ಆಸ್ತಿಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಅನ್ನುವುದು ಸರಿ. ಕರಾರುಪತ್ರಕ್ಕೆ ನನ್ನ ಮಾವ ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ ಅಂದರೆ ನಾನು ಈಗ ನಿಪಿ-1 ನ್ನು ನೋಡುತ್ತಿದ್ದು ಸದರಿ ದಾಖಲೆಯಲ್ಲಿ ನನ್ನ ಮಾವನ ಹೆಬ್ಬೆಟ್ಟಿನ ಗುರುತು ಮತ್ತು ಸಹಿ ಎರಡೂ ಇವೆ. ನಿಪಿ-1 ಕ್ಕೆ ನನ್ನ ಮಾವನ ಹೆಬ್ಬೆಟ್ಟಿನ ಗುರುತಿನ ಕೆಳಗೆ ಎಲ್ ಟಿ ಎಂ ಆಫ್ ರಾಮರೆಡ್ಡಿ ಎಂದು ಬರೆದಿದೆ ಅನ್ನುವುದು ಸರಿಯಲ್ಲ, ನನ್ನ ಮಾವ ಸಹಿಯನ್ನೂ ಸಹ ಮಾಡಿದ್ದಾರೆ. ನಿಪಿ-1 ರಲ್ಲಿ ಹೆಬ್ಬೆಟ್ಟಿನ ಗುರುತಿನ ಕೆಳಗೆ ಇರುವ ನನ್ನ ಮಾವನ ಸಹಿಗಳು ದಿ.03.02.2014 ರ ಕ್ರಯ ಪತ್ರದಲ್ಲಿ ಇರುವ ನನ್ನ ಮಾವನ ಸಹಿಗಳಿಗೆ ಮೇಲ್ನೋಟಕ್ಕೆ ಓಲಿಕೆ ಆಗುತ್ತಿದೆ. ಸಾಕ್ಷಿಯು ಈ ರೀತಿ ಸಹಿಗಳನ್ನು ಒಪ್ಪಿಕೊಳ್ಳುತ್ತಿರುವುದರಿಂದ ದಿ.03.02.2014 ರ ಕ್ರಯ ಪತ್ರದ ನಕಲನ್ನು **ನಿಪಿ-7** ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ತನ್ನ ಮಾವನ ಸಹಿಯನ್ನು **ನಿಪಿ-7(ಎ)** ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಸಾಕ್ಷಿಯು ಗುರುತಿಸಿದ ತನ್ನ

ಮಾವನದ್ದು ಎಂದು ಹೇಳುವ ಸಹಿಗಳನ್ನು **ನಿಪಿ–1(ಹೆಚ್) ರಿಂದ (ಕೆ)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಕೆ.ಎ. ನಾಗೇಶ)
1 ನೇ ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).